**1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

ಸ್ಪೆಷಲ್ ಮೊಕದ್ದಮೆ ನಂಃ 86/2023

| | | |
|---|---|---|
| ಸಾಕ್ಷಿದಾರರ ಹೆಸರು | - ಮೋಹನ | ಪಿಡಬ್ಲ್ಯೂ - 02 |
| ತಂದೆಯ ಹೆಸರು | - ಪರಶುರಾಮ | ಸಿಡಬ್ಲ್ಯೂ - 01 |
| ವಯಸ್ಸು | - 25 ವರ್ಷ | |
| ಉದ್ಯೋಗ | - ಗಾರೆ ಕೆಲಸ | |
| ವಾಸ ಸ್ಥಳ | - ಕಡೂರು | |

ದಿನಾಂಕಃ 12.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಗೊತ್ತು. ಫ್ರಾಸಾ.1, ಚಾಸಾ.3 ಗೊತ್ತು. ಚಾಸಾ.4 ನನ್ನ ಸ್ನೇಹಿತ, ಚಾಸಾ.5 ನನ್ನ ಅಣ್ಣ, ಚಾಸಾ.6 ನನ್ನ ಮಾವ. ಚಾಸಾ.7 ನನಗೆ ಗೊತ್ತಿಲ್ಲ. ನಾನು ಪರಿಶಿಷ್ಟ ಜಾತಿಯ ಆದಿಕರ್ನಾಟಕ ಜನಾಂಗಕ್ಕೆ ಸೇರಿದವನು. ಆರೋಪಿತರು ಯಾವ ಜಾತಿಗೆ ಸೇರಿದವರು ಎಂದು ನನಗೆ ಗೊತ್ತಿಲ್ಲ.

2. ಈಗ್ಗೆ ಒಂದೂವರೆ ವರ್ಷಗಳ ಹಿಂದೆ ಒಂದು ದಿನ ಮಧ್ಯಾಹ್ನ 2.30 ಗಂಟೆಗೆ ನಾನು ನಮ್ಮ ಮನೆಗೆ ಹೋಗುವ ರಸ್ತೆಯಲ್ಲಿ ಆರೋಪಿತರು ಎತ್ತಿನಗಾಡಿಯನ್ನು ರಸ್ತೆಗೆ ಅಡ್ಡ ನಿಲ್ಲಿಸಿ ನನಗೆ ಹೋಗಲು ಬಿಡಲಿಲ್ಲ. ಎಲ್ಲಾ ಆರೋಪಿತರು ಏಕಾಏಕಿ ಬಂದು ನನಗೆ ಹೊಡೆದರು. ನಂತರ ನಾನು ಕಡೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡೆನು. ನಂತರ ಸದರಿ ಆಸ್ಪತ್ರೆಯ ಹೊರಗಡೆ ಚಾಸಾ.5

ಹನುಮಂತುರವರಿಗೆ ಆರೋಪಿತರು ಹೊಡೆದಿದ್ದರು. ಆರೋಪಿತರು ನನಗೆ ಹೊಡೆದು ಎಸ್.ಸಿ./ಎಸ್.ಟಿ. ಜನ ಎಂದು ಕೆಟ್ಟದಾಗಿ ಬೈದರು. ಮೇಲೆ ಹೇಳಿದಂತೆ ಆರೋಪಿತರು ನನಗೆ ಹೊಡೆದ ಸಮಯದಲ್ಲಿ ನಾನು ಮತ್ತು ನನ್ನ ಸ್ನೇಹಿತನಾದ ಚಾಸಾ.4 ರವರು ಆಟೋದಲ್ಲಿ ಹೋಗುತ್ತಿದ್ದೆವು.

3. ಗಲಾಟೆಯಾದ ಮಾರನೆ ದಿನ ನಾನು ತರೀಕೆರೆ ಡಿ.ವೈ.ಎಸ್.ಪಿ. ರವರಿಗೆ ಹೇಳಿಕೆಯನ್ನು ನೀಡಿದ್ದೇನೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ನಂತರ ಮನೆಗೆ ಹೋದೆನು. ಅಷ್ಟನ್ನು ಹೊರತುಪಡಿಸಿ  ಬೇರೆ ಏನು ಹೇಳಲು ಇಲ್ಲ.

4. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ದಿಃ 01-02-2023 ರಂದು ಸಾಕ್ಷಿಯು ಪೊಲೀಸರಿಗೆ ನೀಡಿದ್ದಾರೆ ಎಂದು ಹೇಳಲಾದ ಹೇಳಿಕೆಯ ದೂರಾಗಿದ್ದು, ಅದನ್ನು  ನಿಪಿ.11 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

5. ದಿಃ 31-03-2023 ರಂದು ಸಂಜೆ 4.30 ರಿಂದ 5 ಗಂಟೆ ಸಮಯದಲ್ಲಿ ನಾನು ಚಾಸಾ.4 ರವರೊಂದಿಗೆ ಅವರಿಗೆ ಸೇರಿದ ಕೆಎ-13-ಸಿ-1480 ನೊಂದಣಿ ಸಂಖ್ಯೆಯುಳ್ಳ ಆಟೋವನ್ನು ಚಾಲನೆ

ಮಾಡಿಕೊಂಡು ಹೋಗುತ್ತಿದ್ದು ಆ ಸಮಯದಲ್ಲಿ ಚಾಸಾ.4 ರವರು ನನ್ನ ಪಕ್ಕದಲ್ಲಿ ಕುಳಿತ್ತಿದ್ದು ಆಟೋವನ್ನು ಶನೇಶ್ವರ ದೇವಸ್ಥಾನದ ರಸ್ತೆಯಲ್ಲಿ ತಿರುಗಿಸಿಕೊಳ್ಳುವಾಗ ಪೀಕಿ ಮಂಜಣ್ಣ ಎಂಬುವವರ ಮನೆಯ ಮುಂಭಾಗದಲ್ಲಿ ಎತ್ತಿನ ಪಾನಕದ ಗಾಡಿಯನ್ನು ಚೇತನ್, ಕೆಂಪರಾಜು ಮತ್ತು 5 ನೇ ಆರೋಪಿ ಪೀಕೆ ಸಂಜಯ್ಯ ಮತ್ತು ಅವರ ಕಡೆಯ ಹುಡುಗರಾದ ಇತರೆ ಆರೋಪಿತರು ಗಾಡಿಯನ್ನು ನಿಲ್ಲಿಸಿಕೊಂಡು ನಮ್ಮ ಆಟೋವನ್ನು ಕಂಡು ನಮ್ಮ ಹತ್ತಿರ ಬಂದರು ಎಂದರೆ ಸರಿ. ಆಗ ನಾನು ಮತ್ತು ಚಾಸಾ.4 ರವರು ಆಟೋದಿಂದ ಇಳಿದೆವು ಎಂದರೆ ಸರಿ. ಆಗ ಆರೋಪಿತರು ನಮ್ಮ ಆಟೋ ರಿಕ್ಷಾದ ಮುಂಭಾಗದ ಮತ್ತು ಎಡಭಾಗದ ಗ್ಲಾಸಿಗೆ ಕಲ್ಲನ್ನು ಎತ್ತಿಹಾಕಿ ಒಡೆದು ಹಾಕಿದರು ಎಂದರೆ ಸರಿ. ನಂತರ ಆರೋಪಿತರೆಲ್ಲರು ನನ್ನನ್ನು ಕುರಿತು ಮಾದಿಗ ಸೂಳೆಮಗನೇ ಎಂದು ಇನ್ನೂ ಕೆಟ್ಟ ಶಬ್ಧಗಳಿಂದ ಬೈದರು ಎಂದರೆ ಸರಿ. ನಂತರ ಅವರೆಲ್ಲರು ನನಗೆ ಮತ್ತು ಚಾಸಾ.4 ರವರಿಗೆ ಕೈಗಳಿಂದ ನಮ್ಮ ತಲೆಗೆ, ಬೆನ್ನಿಗೆ, ಮುಖಕ್ಕೆ ಹೊಡೆದು ಕಾಲಿನಿಂದ ತುಳಿದರು ಎಂದರೆ ಸರಿ. ನಂತರ ನಾನು ಮತ್ತು ಚಾಸಾ.4 ರವರು ಜೀವ ಭಯದಿಂದ ಅಲ್ಲಿಂದ ಓಡಿಹೋದೆವು ಎಂದರೆ ಸರಿ.

6. ನಾನು ಮತ್ತು ಚಾಸಾ.4 ರವರು ಕಡೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ರಾತ್ರಿ ಸುಮಾರು 8.00 ಗಂಟೆಯ ಸಮಯದಲ್ಲಿ ಆರೋಪಿತರು ಸದರಿ ಆಸ್ಪತ್ರೆಯ ಹತ್ತಿರ ಬಂದು ನನ್ನನ್ನು ವಿಚಾರಿಸಲು ಅಲ್ಲಿಗೆ ಬಂದಿದ್ದ ನನ್ನ ಅಣ್ಣನಾದ ಚಾಸಾ.5 ರವರಿಗೂ ಸಹ ಕೈಗಳಿಂದ ಮುಖಕ್ಕೆ ಎದೆಗೆ, ಹೊಟ್ಟೆಗೆದ ಪಕ್ಕೆಗೆ ಮತ್ತು ತಲೆಗೆ ಹೊಡೆದು ನೋವುಂಟು ಮಾಡಿದ್ದಾರೆ ಎಂದರೆ ಸರಿ. ನಂತರ ಚಾಸಾ.5 ರವರು ಸಹ ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ

ಪಡೆದಿರುತ್ತಾರೆ ಎಂದರೆ ಸರಿ. ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ಕಡೂರು ಪೊಲೀಸರು ಬಂದು ನಮ್ಮನ್ನು ವಿಚಾರಿಸಿದ್ದಾರೆ ಎಂದರೆ ಸರಿ. ಆಗ ನಾನು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಆರೋಪಿತರ ವಿರುದ್ಧ ಕ್ರಮ ಜರುಗಿಸುವಂತೆ ನಿಪಿ.11 ರಂತೆ ದೂರನ್ನು ನೀಡಿದ್ದೀರಿ ಎಂದರೆ ಸರಿ.

7. ನಂತರ ದಿಃ 15-02-2023 ರಂದು ನಾನು ತರೀಕೆರೆ ಡಿ.ವೈ.ಎಸ್.ಪಿ. ರವರಿಗೆ ಘಟನೆಯಲ್ಲಿ ಆರೋಪಿತರು ಚಾಸಾ.4 ರವರ ಆಟೋಗೆ ಕಲ್ಲುಗಳಿಂದ ಹೊಡೆದು ಗಾಜನ್ನು ಒಡೆದು ಹಾಕಿದ್ದರಿಂದ ಅವರಿಗೆ ರೂ.5,000/- ನಷ್ಟವಾಗಿದೆಂದು ಮತ್ತು ಘಟನೆಯನ್ನು ಚಾಸಾ.6 ರವರು ನೋಡಿದ್ದಾರೆಂದು ತಿಳಿಸಿ ಮರು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿ.

<u>ಪಾಟೀ ಸವಾಲುಃ **3, 5** ಮತ್ತು **7** ನೇ ಆರೋಪಿತರ ಪರವಾಗಿ ಶ್ರೀ ಎಸ್.ಹೆಚ್.ಎಂ.ಕೆ. ವಕೀಲರಿಂದಃ</u>

8. ಘಟನೆ ನಡೆಯಿತು ಎಂದು ಹೇಳಲಾದ ದಿನ ಅಂತರಘಟ್ಟಮ್ಮನ ಜಾತ್ರೆ ಇತ್ತು ಎಂದರೆ ಸರಿ. ಸದರಿ ಜಾತ್ರೆಯ ಸಲುವಾಗಿ ಗ್ರಾಮಸ್ಥರ ಸಂಬಂಧಿಕರು ಮತ್ತು ಇತರರು ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದರು ಎಂದರೆ ಸರಿ. ಸದರಿ ಜಾತ್ರೆಯ ಸಲುವಾಗಿ ಪ್ರತಿ ಗ್ರಾಮಸ್ಥರ ಮನೆಯಲ್ಲಿ ಒಂದು ಕುರಿಯನ್ನು ಕಡಿಯಲಾಗುತ್ತದೆ ಎಂದರೆ ಸರಿ. ಸದರಿ ಜಾತ್ರೆಯ ಸಲುವಾಗಿ ಗ್ರಾಮದ ರಸ್ತೆಯಲ್ಲಿ ಯಾವುದೇ ವಾಹನಗಳು ಪ್ರವೇಶಿಸಿದಂತೆ ಎರಡು ಬದಿಗಳಲ್ಲಿ ಪೊಲೀಸರು ನಿಷೇಧಿಸಿರುತ್ತಾರೆ ಎಂದರೆ ಸರಿ. ಶನೇಶ್ವರ ದೇವಸ್ಥಾನದ ಮುಂಭಾಗದ ರಸ್ತೆಯಲ್ಲಿ ಕಬ್ಬಿನ ಹಾಲನ್ನು ಮಾರಾಟ ಮಾಡುವವರು ತಮ್ಮ ಗಾಡಿಗಳನ್ನು ಸದರಿ ಜಾತ್ರೆಯ ಸಂದರ್ಭದಲ್ಲಿ ನಿಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ದೇವಸ್ಥಾನದ ಮುಂಭಾಗದಲ್ಲಿ

ನಿಲ್ಲಿಸಿದ್ದರು ಎನ್ನುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದು ಎತ್ತಿನ ಗಾಡಿಯ ಬಗ್ಗೆ. ಜಾತ್ರೆಯ ಸಲುವಾಗಿ ಜನರು ಎತ್ತಿನಗಾಡಿಗಳಲ್ಲಿ ಮತ್ತು ಬೇರೆ ವಾಹನಗಳಲ್ಲಿ ಅಲ್ಲಿಗೆ ಬರುತ್ತಾರೆ ಎಂದರೆ ಸರಿ. ಆ ದಿನ ಕಡೂರು ಪಟ್ಟಣ ಮತ್ತು ಅದಕ್ಕೆ ಹೊಂದಿಕೊಂಡಂತಹ ಪ್ರದೇಶಗಳಲ್ಲಿ ಹಬ್ಬದ ವಾತಾವರಣ ಇತ್ತು ಎಂದರೆ ಸರಿ.

9. ಯಾವುದೇ ಆರೋಪಿತರು ನನಗೆ ವೈಯಕ್ತಿಕವಾಗಿ ಪರಿಚಿತರಲ್ಲ. ಆ ದಿನ ಚಾಸಾ.4 ರವರಿಗೆ ಸೇರಿದ ಆಟೋವನ್ನು ನಾನೇ ಚಾಲನೆ ಮಾಡುತ್ತಿದ್ದೆನು, ನನ್ನ ಪಕ್ಕದಲ್ಲಿಯೇ ಚಾಸಾ.4 ರವರು ಕುಳಿತ್ತಿದ್ದರು ಮತ್ತು ಆಟೋದ ಹಿಂಭಾಗ ಖಾಲಿ ಇತ್ತು. ಆ ದಿನ ಹಬ್ಬದ ಪ್ರಯುಕ್ತ ನೀವು ಮತ್ತು ಚಾಸಾ.4 ರವರು ಅತೀಯಾಗಿ ಮದ್ಯಪಾನ ಮಾಡಿ ಆಟೋವನ್ನು ವೇಗವಾಗಿ ಚಲಾಯಿಸಿಕೊಂಡು ಹೋಗಿ ಎತ್ತಿನಗಾಡಿಗೆ ಡಿಕ್ಕಿ ಹೊಡೆದಿದ್ದೀರಿ ಎಂದರೆ ಸರಿಯಲ್ಲ. ಆ ದಿನ ಚಾಸಾ.4 ರವರು ನಿಮ್ಮ ಪಕ್ಕದಲ್ಲಿಯೇ ಕುಳಿತ್ತಿದ್ದ ಕಾರಣ ಮತ್ತು ನೀವು ಆಟೋವನ್ನು ವೇಗವಾಗಿ ಚಲಾಯಿಸುತ್ತಿದ್ದ ಕಾರಣ ನಿಮಗೆ ಬ್ಯಾಲೇನ್ಸ್ ಸಿಗದೇ ಎತ್ತಿನಗಾಡಿಗೆ ಡಿಕ್ಕಿ ಹೊಡೆದಿದ್ದೀರಿ ಎಂದರೆ ಸರಿಯಲ್ಲ. ನನಗೆ ಆಟೋ ಚಲಾಯಿಸಲು ಪರವಾನಿಗೆ ಇದೆ. ಅದನ್ನು ಪೊಲೀಸರಿಗೆ ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

10. ಪೀಕಿ ಮಂಜಣ್ಣರವರ ಮನೆಯ ಅಕ್ಕಪಕ್ಕ ಮತ್ತು ಎದುರಿಗೆ ಹಲವಾರು ವಾಸದ ಮನೆಗಳು ಇವೆ ಎಂದರೆ ಸರಿ. ಆ ದಿನ ಜಾತ್ರೆ ಇದ್ದ ಕಾರಣ ನೀವು ಘಟನೆ ನಡೆಯಿತು ಎಂದು ಹೇಳಲಾದ ಸ್ಥಳದಲ್ಲಿ ಹಲವಾರು ಜನರಿದ್ದರು ಎಂದರೆ ಸಾಕ್ಷಿ ಆರೋಪಿತರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ ಎನ್ನುತ್ತಾರೆ.

11. ಘಟನೆ ನಡೆಯಿತು ಎಂದು ಹೇಳಲಾದ ಸ್ಥಳದಿಂದ ಕಡೂರು ಸರ್ಕಾರಿ ಆಸ್ಪತ್ರೆಗೆ ಅರ್ಧ ಕಿ.ಮೀ. ದೂರವಾಗುತ್ತದೆ. ಆ ದಿನ ಜಾತ್ರೆಯ ಸಲುವಾಗಿ ಪ್ರತಿ ರಸ್ತೆಯಲ್ಲಿ ಪೊಲೀಸರನ್ನು ನಾಕಾಬಂಧಿಗೆ ಹಾಕಲಾಗಿತ್ತು ಎಂದರೆ ಸರಿಯಲ್ಲ. ಘಟನೆ ನಡೆಯಿತು ಎಂದು ಹೇಳಲಾದ ಸ್ಥಳದಿಂದ ಅಂತರಘಟ್ಟಮ್ಮ ದೇವಸ್ಥಾನಕ್ಕೆ ಅರ್ಧ ಕಿ.ಮೀ. ದೂರವಾಗುತ್ತದೆ. ಸದರಿ ಅಂತರಘಟ್ಟಮ್ಮ ದೇವರಿಗೆ ಯಾವುದೇ ಭೇದಬಾವ ಇಲ್ಲದೇ ಎಲ್ಲಾ ಜಾತಿಯವರು ನಡೆದುಕೊಳ್ಳುತ್ತಾರೆ ಎಂದರೆ ಸರಿ.

(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ